ಕರ್ನಾಟಕ ಸರ್ಕಾರ

**ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ, ಬೆಂಗಳೂರು ಇವರು ಹೊರಡಿಸಿರುವ ನಡವಳಿಗಳು**

ವಿಷಯ: COVID-19 ಸಾಂಕ್ರಾಮಿಕ ರೋಗ ಹರಡುತ್ತಿರುವ ಹಿನ್ನಲೆಯಲ್ಲಿ ಅಗತ್ಯ ಸೌಲಭ್ಯ ಕಲ್ಪಿಸುವ ಸಲುವಾಗಿ ಹಾಗೂ ತುರ್ತು ವೆಚ್ಚ ಭರಿಸುವ ಸಲುವಾಗಿ "ತುರ್ತು ನಿಧಿ" ಬಳಕೆ ಬಗ್ಗೆ.

ಉಲ್ಲೇಖ:1. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಪತ್ರ ಸಂಖ್ಯೆ: DD SSU /Novel Corona virus/17/2019-20 dt:18.02.2020.
2. F.61(520)/Spsu/ICPS/Do(cpu)/DWCD/2013 dt:17.03.2020.
3. ಕರಾಮರಸೊ/ಐ.ಇ.ಸಿ/ಕ-19/47/2019-20 ದಿನಾಂಕ: 18.03.2020

**********

<u>ಪ್ರಸ್ತಾವನೆ</u> : ನೋವೆಲ್ ಕರೋನಾ ವೈರಸ್ ಎಂಬ ಸಾಂಕ್ರಾಮಿಕ ಮಾಹಾಮಾರಿ ರೋಗವು ಕರ್ನಾಟಕ ರಾಜ್ಯಾದ್ಯಂತ ವ್ಯಾಪಿಸುತ್ತಿದೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಕರೋನಾ ವೈರಸ್ ಕುರಿತು ಜಾಗೃತಿ ಮತ್ತು ಮುಂಜಾಗ್ರತೆಯನ್ನು ವಹಿಸುವ ಕುರಿತು ದಿನಾಂಕ: 18.02.2020ರ (ಉಲ್ಲೇಖ1)ರಲ್ಲಿ Advisory ಹೊರಡಿಸಿರುತ್ತಾರೆ. ಉಲ್ಲೇಖ(2)ರಲ್ಲಿ ಭಾರತ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯ ಸಹ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿರುವ ಮಕ್ಕಳಿಗೆ ಸೋಂಕು ಹರಡದಂತೆ ಎಲ್ಲಾ ಅಗತ್ಯ ಕ್ರಮ ತೆಗೆದುಕೊಳ್ಳಲು ಸೂಚಿಸಿರುತ್ತಾರೆ. ಹಾಗೂ ಉಲ್ಲೇಖ(3)ರ ನಿರ್ದೇಶನಲಯದ ಸುತ್ತೋಲೆಯಲ್ಲಿ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ COVID-19 ಹರಡುವುದನ್ನು ತಡೆಗಟ್ಟಲು ಮುಂಜಾಗ್ರತೆಗಾಗಿ ಕ್ರಮವಹಿಸಲು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಿಗೆ ಸೂಚಿಸಲಾಗಿದೆ.

ಆದುದರಿಂದ ಮಕ್ಕಳ ಹಿತದೃಷ್ಟಿಯಿಂದ ರೋಗ ಹರಡದಂತೆ ಅಗತ್ಯ ಮುನ್ನೆಚರಿಕಾ ಕ್ರಮಗಳನ್ನು ತೆಗೆದುಕೊಳ್ಳುವ ಸಲುವಾಗಿ ಸರ್ಕಾರಿ ಬಾಲಮಂದಿರ/ ವೀಕ್ಷಣಾಲಯದ ಮಕ್ಕಳ ಉಪಯೋಗಕ್ಕೆ ಬೇಕಾಗುವ ಎಲ್ಲಾ ಅಗತ್ಯ ತುರ್ತು ಸಾಮಾಗ್ರಿಗಳನ್ನು ಖರೀದಿಸಲು ಮಂಜೂರಾತಿ ನೀಡುವುದು ಈ ತುರ್ತು ಪರಿಸ್ಥಿತಿಯಲ್ಲಿ ಅಗತ್ಯವಾಗಿರುತ್ತದೆ.

ಆದುದರಿಂದ ತಮ್ಮ ವ್ಯಾಪ್ತಿಯಲ್ಲಿ ಅನುದಾನ ರೂ.1.00ಲಕ್ಷ ಮಿತಿ ಒಳಗೆ ಸಂಸ್ಥೆಗಳಿಗೆ ಉಪ ಲೆಕ್ಕ ಶೀರ್ಷಿಕೆ 051(ಸಾಮಾನ್ಯ ವೆಚ್ಚ)ರಡಿಯಲ್ಲಿ ಬಿಡುಗಡೆಯಾಗಿ ವೆಚ್ಚ ಭರಿಸಿ ಉಳಿಕೆಯಾಗಿರುವ ಅನುದಾನದಲ್ಲಿ, ಅನುದಾನ ವ್ಯಪಗತವಾಗದಂತೆ ಸಂಪೂರ್ಣವಾಗಿ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇವರ ಅನುಮೋದನೆ ಪಡೆದು, ನಿಯಮಾನುಸಾರ A.C ಬಿಲ್ಲುಗಳ ಮೂಲಕ ನಗದು ಸೆಳೆದು "ತುರ್ತು ನಿಧಿ"(Emergency Fund) ರೀತಿಯಲ್ಲಿ ಬಳಸಲು ಅನುವಾಗುವಂತೆ ಮಂಜೂರಾತಿ ನೀಡಿ ಆದೇಶಿಸಿಬೇಕಾಗಿರುವುದರಿಂದ ಹಾಗೂ ಮುಂದುವರೆದು "ತುರ್ತು ನಿಧಿ"(Emergency Fund) ರೂ.1.00ಲಕ್ಷ ಗರಿಷ್ಠಮಿತಿಗೆ ಒಳಪಡಬೇಕಾಗಿರುವುದರಿಂದ ಈ ಕೆಳಕಂಡ ಆದೇಶ ಹೊರಡಿಸಿದೆ

ಸಂಖ್ಯೆ:ಕೆ.ಎಸ್.ಐ.ಸಿ.ಪಿ.ಎಸ್/ಲೆಪವಿ-01/ಬಾವೀಅ/31/2019-20

ನಿರ್ದೇಶಕರು ಕಛೇರಿ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಬೆಂಗಳೂರು, ದಿನಾಂಕ:19.03.2020.

<u>ಆದೇಶ</u>

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ನೋವೆಲ್ ಕರೋನಾ ವೈರಸ್ ಸಾಂಕ್ರಾಮಿಕ ಮಾಹಾಮಾರಿ ರೋಗವು ಹರಡದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವ ಸಲುವಾಗಿ ಸರ್ಕಾರಿ ಬಾಲಮಂದಿರ/ ವೀಕ್ಷಣಾಲಯದ ಮಕ್ಕಳ

Scanned by TapScanner

ಉಪಯೋಗಕ್ಕೆ ಬೇಕಾಗುವ ಎಲ್ಲಾ ಅಗತ್ಯ ತುರ್ತು ಸಾಮಾಗ್ರಿಗಳನ್ನು ಖರೀದಿಸಲು ಹಾಗೂ COVID–19ಗೆ ಸಂಬಂಧಪಟ್ಟ ಇತರೆ ವೈದ್ಯಕೀಯ ಹಾಗೂ ಪೂರಕ ವೆಚ್ಚಗಳಿಗೆ ತಮ್ಮ ವ್ಯಾಪ್ತಿಯಲ್ಲಿ ರೂ.1.00ಲಕ್ಷ ಮಿತಿ ಒಳಗೆ (ಬೆಂಗಳೂರು ನಗರ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ರೂ.2.00ಲಕ್ಷ ಮಿತಿ ಒಳಗೆ) ಸಂಸ್ಥೆಗಳಲ್ಲಿ ಉಪ ಲೆಕ್ಕ ಶೀರ್ಷಿಕೆ 051(ಸಾಮಾನ್ಯ ವೆಚ್ಚ)ರಡಿಯಲ್ಲಿ ಬಿಡುಗಡೆಯಾಗಿ ವೆಚ್ಚ ಭರಿಸಿ ಉಳಿಕೆಯಾಗಿರುವ ಅನುದಾನದಿಂದ KTTP ಕಾಯ್ದೆಯ ಅನುಸಾರ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇವರ ಅನುಮೋದನೆ ಪಡೆದು, ನಿಯಮಾನುಸಾರ A.C ಬಿಲ್ಲುಗಳ ಮೂಲಕ ನಗದು ಸಳೆದು "ತುರ್ತು ನಿಧಿ"(Emergency Fund) ರೀತಿಯಲ್ಲಿ ರೂ.1.00ಲಕ್ಷ ಗರಿಷ್ಠಮಿತಿಗೆ ವೆಚ್ಚ ಭರಿಸಲು ಮಂಜೂರಾತಿ ನೀಡಿ ಆದೇಶಿಸಿದೆ.

ಮುಂದುವರೆದಂತೆ ರೂ.1.00ಲಕ್ಷಕ್ಕಿಂತ ಹೆಚ್ಚು ಅನುದಾನ ಭರಿಸಬೇಕಾದಲ್ಲಿ ಕೇಂದ್ರ ಕಛೇರಿಗೆ ಜಿಲ್ಲಾಧಿಕಾರಿಗಳ ಮೂಲಕ ಪ್ರಸ್ತಾವನೆಯನ್ನು ಸಲ್ಲಿಸಿದಲ್ಲಿ ಮಂಜೂರಾತಿ ನೀಡಲಾಗುವುದು.

ನಿರ್ದೇಶಕರು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಹಾಗೂ
ಸದಸ್ಯ ಕಾರ್ಯದರ್ಶಿಗಳು,
ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ,
ಬೆಂಗಳೂರು.

ಪ್ರತಿಯನ್ನು:

1. ನಿರ್ದೇಶಕರು, ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ, ಇವರ ಮಾಹಿತಿಗಾಗಿ.
2. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಎಲ್ಲಾ ಜಿಲ್ಲೆಗಳು.
3. ಆಧೀಕ್ಷಕರು, ಎಲ್ಲಾ ಬಾಲಮಂದಿರ/ವೀಕ್ಷಣಾಲಯಗಳು ಎಲ್ಲಾ ಜಿಲ್ಲಿಗಳು.
4. ಕಛೇರಿ ಪ್ರತಿ.

Scanned by TapScanner